ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,ಅರಕಲಗೂಡು

**ಸಿ. ಸಿ. ನಂಃ 50/2018**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ವೆಂಕಟೇಶ | **ದಿನಾಂಕ** | ಃ | **18/01/2024** |
| **ತಂದೆಯ ಹೆಸರು** | ಃ | ಹನುಮ ಶೆಟ್ಟಿ | **ಸಿ ಡಬ್ಲ್ಯೂ** | ಃ | **02** |
| **ವಯಸ್ಸು** | ಃ | 54 ವರ್ಷ | **ಪಿ ಡಬ್ಲ್ಯೂ** | ಃ | **02** |
| **ಉದ್ಯೋಗ** | ಃ | ವ್ಯವಸಾಯ | | | |
| **ವಿಳಾಸ** | ಃ | ಬಿಟ್ಟಗೌಡನಹಳ್ಳಿ ಗ್ರಾಮ | | | |

**ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಸಸಅ ರವರಿಂದ ಃ-

ಚಾಸಾ 1 ಹಾಗೂ 3 ನನ್ನ ಊರಿನವರು, ಆರೋಪಿಯೂ ಸಹ ನನ್ನ ಊರಿನವನು. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನನಗೆ ಯಾವುದೇ ಮಾಹಿತಿ ಇರುರುವುದಿಲ್ಲ.ನನ್ನ ಸಮಕ್ಷಮ ಕೃತ್ಯ ಸ್ಥಳ ಹಾಗೂ ಅಮಾನತು ಮಹಜರ್ ಮಾಡಿರುವುದಿಲ್ಲ. 2018 ನೇ ಇಸವಿಯಲ್ಲಿ ನಾನು ಯಾವುದೋ ವಿಚಾರಕ್ಕೆ ಅರಕಲಗೂಡು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನನ್ನಿಂದ ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ಅದು ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಕೃತ್ಯ ಸ್ಥಳ ಮತ್ತು ಅಮಾನತು ಮಹಜರ್ ತೋರಿಸಲಾಗಿ ಅದನ್ನು ಒಪ್ಪಿದ ಕಾರಣ ಅದನ್ನು ನಿಪಿ 1 ಎಂದು ಹಾಗೂ ಅದರ ಮೇಲಿನ ಸಾಕ್ಷಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟಿ ಸವಾಲು ಎಪಿಪಿಯವರಿಂದಃ**

ದಿನಾಂಕ 22.09.2017 ರಂದು ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ಬಿಟ್ಟಗೌಡನ ಹಳ್ಳಿ ಗ್ರಾಮದ ಹತ್ತಿರ ಕೆಎ-02 ಇಟಿ-8450 ಸ್ಪ್ಲೆಂಡರ್ ಪ್ಲಸ್ ಬೈಕಿನ ಅಪಘಾತವಾದ ಬಗ್ಗೆ ದಿನಾಂಕ 24.09.2017 ರಂದು ಅರಕಲಗೂಡು ಪೊಲೀಸ್ ಠಾಣೆಯ ಪೊಲೀಸರು ಅಪಘಾತ ನಡೆದ ಕೃತ್ಯ ಸ್ಥಳಕ್ಕೆ ಬಂದು ನನ್ನ ಹಾಗೂ ಚಾಸಾ 1 ಮತ್ತು 3 ರವರ ಸಮಕ್ಷಮ ಬೆಳಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ನಿಪಿ 1 ರಂತೆ ಕೃತ್ಯ ಸ್ಥಳ ಹಾಗೂ ಅಮಾನತು ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಕಾಲದಲ್ಲಿ ಪೊಲೀಸರು ಕೆಎ-02 ಇಟಿ-8450 ರ ಬೈಕನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮಹಜರ್ ಕಾಲದಲ್ಲಿ ನಾನು ಹಾಜರಿದ್ದರೂ ಸಹ ಆರೋಪಿ ನನ್ನ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿಯ ಪರ ವಕೀಲರಿಂದಃ

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**